ಮೈಸೂರ ಗೆಜೆಟ್.

ನಂ. 7. ಸರ್ಕಾರದಿಂದ ಪ್ರಕಟಿಸಿದ್ದು. ಸನ 1877.

ಬೆಂಗಳೂರು, ಶನಿವಾರ, ಫಿಬ್ರವರೀ ತಾ॥ 17, ಸನ 1877.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಚೀವೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟನವರ ಇಸ್ತಿಹಾರ್ ನಾಮೆಗಳು. .. .. ಪುಟ 33—35

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಇಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಾಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಖಾಲಿ ಡೈರೆಕ್ಟರು, ಫಾರೆಸ್ಟ್ ಕನ್‌ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ಯ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್‌ಇಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. .. 93—106

3ನೇ ಭಾಗ—ಇಂಡ್ಯ ಗವರ್ಮೆಂಟಿನ ಶಾಸನೋತ್ಪಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. .. 1—3

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆಪಟ್ಟಿ .. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 379. ತಾರೀಖು 25ನೇ ಜನವರೀ 1877.

ಸನ 1870ನೇ ಇಸವಿಯ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ವಿವರಿಸಿರುವ ಜಮೀನು ಸರಕಾರದ ಕೆಲಸಕ್ಕೆ ಅಂದರೆ ಪಿಕಾರಿಪುರ ತಾಲ್ಲೂಕು ಕಿರಾಲ್‌ಕೊಪ್ಪ ಗ್ರಾಮದ ಈ ಗಿರುವ ನಿವೇಶನವನ್ನು ವೈದ್ದಿಪಡಿಸುವ ಬಗ್ಯೆ ಬೇಕಾಗಿರುತ್ತೆಂದು ಇದರಿಂದ ತಿಳಿಸಲ್ಪಟ್ಟಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕನ ಹೆಸರು.	ಸ್ಥಳ.	ವಿಸ್ತೀರ್ಣ.	ಚಕ್ಕುಬಂದಿ.
ಪಿಕಾರಿಪುರ.	ಶಿರಾಲ್‌ಕೊಪ್ಪ.	ಶಿರಾಲ್‌ಕೊಪ್ಪ.	ಬಿಸ್ಟಪ್ಪ.	ಶಿರಾಲ್‌ಕೊಪ್ಪ ಸರ್ವೇ ನಂಬರ್ 183.	ಎಕರೆ. ಗು. ಗೆ. 6 17 0	ಪೂರ್ವಕ್ಕೆ—ಹೊಂಡಕ್ಕೆ ಹೋಗುವ ಕಾಲುದಾರಿ. ಪಶ್ಚಿಮಕ್ಕೆ—ಮುಸಾಫರಿ ಖಾನೆ. ದಕ್ಷಿಣಕ್ಕೆ—ಗುಡಾ ಮತ್ತು ಇತರ ಯೆಂಟು ಜನಗಳ ಹಿತ್ತಲುಗಳು. ಉತ್ತರಕ್ಕೆ—ವುಡಜಲಮ್ಮನ ಮನೆಯ ಹಿತ್ತಲು.

ನಂ. 381. ತಾರೀಖು 31ನೇ ಜನವರೀ 1877.

ಬಳ್ಳಾರಿ ಡಿಸ್ಟ್ರಿಕ್ಟ್ಸು ಹೊಸಪೇಟೆ ತಾಲ್ಲೂಕು ಹಂಪೆಸುತ್ತಲು ಯಿರುವ ಅನೇಕ ಗ್ರಾಮಗಳಲ್ಲಿ ಉಖಾಲ್ ಜುಲಾಬ್ ಉಪದ್ರವವು ಆದ್ಯಾಪಿ ವ್ಯಾಪಿಸಿರುತೆಂದು ವರ್ತಮಾನ ತಲಪಿರುವೆದ್ದರಿಂದ ಆ ಸ್ಥಳಕ್ಕೆ ಹೋಗುವೆದಕ್ಕೆ ಯತ್ನಿಸುವ ಯಾತ್ರೆ ಜನಗಳು ಬರುವ ಮಾರ್ಚೀ 29ನೇ ತಾರೀಖು ಆಸುಮಾರಿನಲ್ಲಿ ನಡಿಯುವ ಜಾತ್ರೆಗೆ ಜೊತೆ ಸೇರುವದರಿಂದ ಅವರಿಗೆ ಪ್ರಾಪ್ತವಾಗಬಹುದಾದ ಅಪಾಯವನ್ನು ಕುರಿತು ಇದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

ನಂ. 396. ತಾರೀಖು 10ನೇ ಫಿಬ್ರವರೀ 1877.

ಹಾಸನ ಡಿಸ್ಟ್ರಿಕ್ಟಿನಲ್ಲಿ ಸಬ್ ಡಿವೀಜನ್‌ಗಳ ಚಾರ್ಜನಲ್ಲಿರುವ ಅಸಿಸ್ಟೆಂಟರುಗಳ ಇದರಡಿ ಬರುವ ವರ್ಗಾವರ್ಗಿಯು ಮಂಜೂರಾಗಿರುತ್ತೆ. ಮೆಸ್ಟರ್ V N ನರಸಿಂಹಯ್ಯಂಗಾರ್ರು ಸಕ್ಲೇಶಪುರ ಸಬ್ ಡಿವೀಜನ್ನಿಂದ ಕಿಕ್ಕೇರೀ ಸಬ್ ಡಿವಿಜನ್ನಿಗೆ ಮೆಸ್ಟರ್ A ಶ್ರೀನಿವಾಸೈಯ್ಯಂಗಾರ್ರು ಕಿಕ್ಕೇರೀ ಸಬ್ ಡಿವಿಜನ್ನಿಂದ ಸಕ್ಲೇಶಪುರ ಸಬ್ ಡಿವಿಜನ್ನಿಗೆ.

ನಂ. 397. ತಾರೀಖು 10ನೇ ಫಿಬ್ರವರೀ 1877.

ಇನಾಂ ಇಲಾಖಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಕಿಟ್ಟೂರ್ ನವರು, ಆಷ್ಟಗ್ರಾಮ ಡಿವಿಜ಼ನ್ ಕಮ್ಮಿಷನ್ನರ್‌ಯವರ ರಜಾ ತಲಬಿನಲ್ಲಿ, ಆ ಡಿವೀಜನೊಳಗೆ ಜನರಲ್ ಡ್ಯೂಟಿ ಬಗ್ಗೆ, ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಇಡಲ್ಪಟ್ಟಿರುತ್ತಾರೆ.

ನಂ. 398. ತಾರೀಖು 10ನೇ ಫಿಬ್ರವರೀ 1877.

B ರೂಲ್ 6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ ನರಸಿಂಗರಾಯರು ಮೈಸೂರು ಇನಾಂ ಕಮ್ಮಿಷನರವರ ರಜಾ ತಲಬಿನಲ್ಲಿ, ಆ ಇಲಾಖೆಯೊಳಗೆ ನೌಕರೀ ಬಗ್ಗೆ, ಇಡಲ್ಪಟ್ಟಿರುತ್ತಾರೆ.

ನಂ. 399. ತಾರೀಖು 10ನೇ ಫಿಬ್ರವರೀ 1877.

ಇದರಡಿ ಬರುವ ಹಂಗಾಮಿ ಬಡ್ತಿಗಳು ಮಂಜೂರಾಗಿವೆ.

ಮಳವಳ್ಳಿ ತಾಲ್ಲೂಕು 4ನೇ ಗ್ರೇಡ್ ಅಮಲ್ದಾರ್ ನರಸಿಂಹಯ್ಯಂಗಾರ್ರು, ಹಂಗಾಮೀ ಯೇರ್ಪಾಡು ತರೀಕ ಸುಬ್ಬಯ್ಯನಿಗೆ ಬದಲಾಗಿ ಮೈಸೂರು ಡಿಸ್ಟ್ರಿಕ್ಟ್ಸು ಮಂಡ್ಯ ತಾಲ್ಲೂಕು ಅಮಲ್ದಾರ್ ಆ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್.

87
16

ಅಷ್ಟಗ್ರಾಮ ಡಿವಿಜ್ ಆಕ್ಟಿಂಗ್ ಸೆಕೆಂಡ್ ಕ್ಲರ್ಕ್ ಕೃಷ್ಣಮೂರ್ತಿರಾಯರು ಮಳವಳ್ಳಿ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಕಾದ ಇಸ್ತಿಹಾರ್ ನಾಮೆ.

ಜನರಲ್.

ಇಸ್ತಿಹಾರ್ ನಾಮೆ.

ನಂ. 18. ತಾರೀಖು 13ನೇ ಫಿಬ್ರವರೀ 1877.

ರವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಮೇಜರ್ ಸಾರಜಿಯಾಂಟ್ ಯವರು ಮದರಾಸ್ ರೆವಿನ್ಯೂ ಸರ್ವೆ ಸೂಪರಿಟೆಂಡೆಂಟರ ಆಫಿಸ್ ಬಾರ್ಜ್‌ನಲ್ಲಿರುವಲ್ಲಿ ಕೊಡಗಿನ ರೆವಿನ್ಯೂ ಸರ್ವೆ ಸೂಪರಿಟೆಂಡೆಂಟ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್. ಮೇಜರ್ ಸಾರ್ಜಿಯಾಂಟ್ ಯವರು 1877ನೇ ಜನವರೀ 15ನೇ ಮುಕ್ತಂನಲ್ಲಿ ಚಾರ್ಜನ್ನು ವಹಿಸಿದರು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.